■ ವಿಶಾಖ ಎನ್.

# ತಮಿಳು ಸಿನಿಮಾ ಛಿತ್ತಿಯಲ್ಲಿ ರಂಜಿತ್ ರುಜು




'ನಚ್ಚತ್ತಿರಮ್ ನಗರ್‌ಗಿರದು' ಎಂಬ ತಮಿಳು 'ಲವ್ ಜಿಹಾದ್' ಸಮಾಜೋ–ರಾಜಕೀಯ ಅನಾವರಣಗೊಳಿಸುವ ಸಿನಿಮಾವನ್ನು ನಿರ್ದೇಶಕ ಪಾ. ರಂಜಿತ್ ಪ್ರೇಕ್ಷಕರ ಮುಂದಿಟ್ಟು ಕೆಲವೇ ವಾರಗಳಾಗಿವೆ. ಅವರ ವೃತ್ತಿಬದುಕಿನ ಅತಿ ಬೋಲ್ಡ್ ಚಲನಚಿತ್ರ ಇದು ಎಂಬ ವಿಮರ್ಶೆ ವ್ಯಕ್ತವಾಗುತ್ತಿದೆ.

ರಂಜಿತ್ ದಲಿತ ಸೂಕ್ಷ್ಮಗಳಿರುವ ಸಿನಿಮಾ ಮಾಡಲಾರಂಭಿಸಿ ದಶಕವೇ ಆಗಿದೆ. ಈಗಲೂ ತಾವು ಅಂದುಕೊಂಡಿದ್ದನ್ನು ಸಿದ್ಧ ಟೆಂಪ್ಲೇಟ್‌ಗಳಿಂದ ಆಚೆ ಬಂದು ಕಟ್ಟಿಕೊಡುತ್ತಿರುವ ಅವರ ದೃಶ್ಯ ಮಾಧ್ಯಮ ಪ್ರಯೋಗಗಳು ಹೊಸಕಾಲದ ಹೋರಾಟವೇ ಹೌದು.

ಎರಡು ದಶಕಗಳ ಹಿಂದೆ ತಮಿಳು ಸಿನಿಮಾಗಳಲ್ಲಿ ನಾಯಕ ಪ್ರತಿನಿಧಿಸುತ್ತಿದ್ದ ಜಮೀನ್ದಾರಿ ಸಮುದಾಯಗಳು, ಅವರ ಸುತ್ತ ಕೈಕಟ್ಟಿ ನಿಲ್ಲುತ್ತಿದ್ದ ವಂದಿಮಾಗಧರ ಪಟಾಲಮ್ಮು, ಹೆಣ್ಣುಪಾತ್ರಗಳಿರುವುದೇ ಗಂಡಿಗೆ ಉಘೇ ಉಘೇ ಎನ್ನುವುದಕ್ಕೆ ಎಂಬಂತಹ ಕಟ್ಟುಗಳನ್ನು ರಂಜಿತ್ ಮುರಿದುಹಾಕಿದರು. ಉತ್ತರ ಹಾಗೂ ಪಶ್ಚಿಮ ತಮಿಳುನಾಡಿನ ದಲಿತ ಸಂವೇದನೆ ರಂಜಿತ್ ರಕ್ತದಲ್ಲಿ ಮಡುಗಟ್ಟಿದೆ. ಅದನ್ನೇ ಅವರು ದೃಶ್ಯದ ಮೂಲಕ ಹರಿಯಬಿಡುತ್ತಾ, ಮಡುಗಟ್ಟಿದ ಆ ತುಮುಲಗಳನ್ನು ನಿಧನಿಧಾನ ಹೊರಹಾಕುತ್ತಿರುವುದು ಆಸಕ್ತಿಕರ.

'ಮದ್ರಾಸ್' ಚಲನಚಿತ್ರದಲ್ಲಿಯೇ ಅವರು ಸಮಾಜೋ–ರಾಜಕೀಯ ಆಯಾಮಗಳನ್ನು ತಡಕಾಡಲಾರಂಭಿಸಿದ್ದರು. ರಜನೀಕಾಂತ್ ತರಹದ ಸೂಪರ್ ಸ್ಟಾರ್ ಕಾಲ್‌ಷೀಟ್ ಸಿಕ್ಕಮೇಲೂ ತಮ್ಮ ರುಜುವನ್ನು ಬದಲಿಸದೆ, ಆಗಲೂ ದಲಿತ ಸಂವೇದನೆಯನ್ನೇ ತೆರೆಮೇಲೆ ತಂದದ್ದು ರಂಜಿತ್ ಎದೆಬಡಿತ ಹಾಗೂ ಬದ್ಧತೆಗೆ ಸಾಕ್ಷಿ.



ಬಹುಜನ ಸುಖಾಯ ಎನ್ನುವಂತಹ ಪರಿಕಲ್ಪನೆಯನ್ನು ದೃಶ್ಯಮಾಧ್ಯಮಕ್ಕೆ ಒಗ್ಗಿಸಿಕೊಂಡು ಬಂದಿದ್ದ ಸಿನಿಮಾ ತಯಾರಕರು ಈಗ ಯೋಚಿಸಬೇಕಾಗಿದೆ. ಗೌತಮ್ ವಾಸುದೇವ್ ಮೆನನ್, ಶಂಕರ್, ಮಣಿರತ್ನಂ ತರಹದ ನಿರ್ದೇಶಕರ ಮಾದರಿಗಳನ್ನು ಮೀರಿದಂತಹ ಆಸಕ್ತಿಕರ ಕಥಾಜಗತ್ತನ್ನು ರಂಜಿತ್ ದೃಶ್ಯಮಾಧ್ಯಮಕ್ಕೆ ತಂದಿದ್ದಾರೆ. ಮಾರಿ ಸೆಲ್ವರಾಜ್, ಲೋಕೇಶ್ ಕನಕರಾಜ್ ತರಹದ ನಿರ್ದೇಶಕರು ಕೂಡ ತೆರೆಮೇಲೆ ದ್ರಾವಿಡ ರಾಜಕೀಯದ ಇನ್ನೊಂದು ಮುಖವನ್ನು ತಮ್ಮತನದ ಸಹಿಯೊಟ್ಟಿಗೆ ತರುತ್ತಿರುವುದು ಸಹ ಗಮನಿಸಬೇಕಾದ ಸಂಗತಿ.

ವೆಟ್ರಿಮಾರನ್ ತಮ್ಮ ಚಲನಚಿತ್ರಗಳಲ್ಲಿ ಪಡಿಮೂಡಿಸುತ್ತಿರುವ ದನಿಯಲ್ಲೂ ರಂಜಿತ್ ಮಾರ್ಗವೊಂದರ ಛಾಯೆ ಇದ್ದೆ ಇದೆ. ಹಾಗೆ ನೋಡಿದರೆ ವೆಟ್ರಿಮಾರನ್, ರಂಜಿತ್ ಅವರಿಗಿಂತ ಸಾಕಷ್ಟು ಮೊದಲೇ ಚಲನಚಿತ್ರ ನಿರ್ದೇಶನಕ್ಕೆ ಇಳಿದವರು.

ಬಿಲ್ಡಪ್‌ಗಳ ಅಬ್ಬರದಲ್ಲಿ, ಕ್ರೌರ್ಯ ಕಥಾನಕಗಳ ಮೆರವಣಿಗೆಯಲ್ಲಿ ಕಳೆದುಹೋಗಿದ್ದ ತಮಿಳು ಚಿತ್ರರಂಗಕ್ಕೆ ರಂಜಿತ್ ಚುಚ್ಚುಮದ್ದನ್ನು ಕೊಟ್ಟಿದ್ದಾರೆ ಎಂದು ಕೆಲವರು ಗುರುತಿಸುತ್ತಿರುವುದು ಅರ್ಥಪೂರ್ಣ. ■

# ಕಂಗನಾಗೆ ವರ್ಮಾ ಸರ್ಟಿಫಿಕೇಟ್



'1984ರ ಸಂದರ್ಶನವೊಂದನ್ನು ನೋಡಿದೆ. ಇಂದಿರಾಗಾಂಧಿ ಅವರು ಕಂಗನಾ ರನೋತ್ ಅವರನ್ನು ಅನುಕರಿಸುತ್ತಿರುವಂತಿದೆ' – ಹೀಗೊಂದು ಟ್ವೀಟ್ ಅನ್ನು ರಾಮ್‌ಗೋಪಾಲ್ ವರ್ಮಾ ಮಾಡಿದ್ದಾರೆ. 'ಎಮರ್ಜೆನ್ಸಿ' ಹಿಂದಿ ಚಲನಚಿತ್ರದಲ್ಲಿ ಕಂಗನಾ ರನೋತ್ ನಿರ್ವಹಿಸಿರುವ ಪಾತ್ರದ ಕುರಿತು ವರ್ಮಾ ಅವರ ಶ್ಲಾಘನೆ ಇದು.

ಖುದ್ದು ಕಂಗನಾ ನಿರ್ದೇಶಿಸುತ್ತಿರುವ ಸಿನಿಮಾದ ಮೊದಲ ನೋಟದ ವಿಡಿಯೊ ಇತ್ತೀಚೆಗೆ ಬಿಡುಗಡೆಯಾಗಿದೆ. ವರ್ಮಾ ತರಹದ ಹಿರಿಯ ನಿರ್ದೇಶಕರ ಹೊಗಳಿಕೆ ತಮ್ಮ ಕೆಲಸ ಮಾಡುವ ಉತ್ಸಾಹವನ್ನು ಹೆಚ್ಚುಮಾಡಿದೆ ಎಂದು ಕಂಗನಾ ಪ್ರತಿಕ್ರಿಯಿಸಿದ್ದಾರೆ. ಇದೇ ಸಿನಿಮಾದಲ್ಲಿ ಅನುಪಮ್ ಖೇರ್ ಅವರು ಜಯಪ್ರಕಾಶ್ ನಾರಾಯಣ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ■

